ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ಪಾಲಿಕೆಯ ಮುಖ್ಯ ಕಛೇರಿಗಳು.ನರಸಿಂಹರಾಜ ಚೌಕ, ಬೆಂಗಳೂರು-560 002

ಸಂಖ್ಯೆ:ಆ/ಪಿ.ಆರ್/ 811 /2017-18 ದಿನಾಂಕ: 08-05-2017

ಕಛೇರಿ ಆದೇಶ

ವಿಷಯ:- ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆ ಅಡಿಗಳಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಮೆ.ಕೆಆರ್ಐಡಿಎಲ್ ಸಂಸ್ಥೆ ಮುಖಾಂತರ ಅನುಷ್ಠಾನಗೊಳಿಸುವ ಬಗ್ಗೆ.

.....

ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಾರ್ಡ್‌ಗಳಿಗೆ ಈ ಕೆಳಕಂಡಂತೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಅನುದಾನ ನೀಡಲಾಗಿರುತ್ತದೆ.

1. 2015-16 ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ-1802 ರಲ್ಲಿ ಪ್ರತಿ ಹಳೆ ವಾರ್ಡ್ ಗೆ ರೂ.15.00 ಲಕ್ಷಗಳ ಮತ್ತು ಹೊಸ ವಾರ್ಡ್‌ಗೆ ರೂ.40.00 ಲಕ್ಷಗಳ ಅನುದಾನವನ್ನು ನೀಡಲಾಗಿರುತ್ತದೆ.
2. 2016-17ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ-1802 ರಲ್ಲಿ ಪ್ರತಿ ಹಳೆ ವಾರ್ಡ್ ಗೆ ರೂ.15.00 ಲಕ್ಷಗಳ ಮತ್ತು ಹೊಸ ವಾರ್ಡ್‌ಗೆ ರೂ.40.00 ಲಕ್ಷಗಳ ಅನುದಾನವನ್ನು ನೀಡಲಾಗಿರುತ್ತದೆ.
3. 2015-16 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ 14 ನೇ ಹಣಕಾಸು ಆಯೋಗದಲ್ಲಿ ರೂ.2800.00 ಲಕ್ಷಗಳು ಅನುವು ಮಾಡಿದ್ದು ಕ್ರಿಯಾ ಯೋಜನೆಯು ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.
4. 2016-17 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ 14 ನೇ ಹಣಕಾಸು ಆಯೋಗದಲ್ಲಿ ರೂ.3400.00 ಲಕ್ಷಗಳು ಅನುವು ಮಾಡಿದ್ದು ಕ್ರಿಯಾ ಯೋಜನೆಯು ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.

ಈ ಅಂಶಕ್ಕೆ ಸಂಬಂಧಿಸಿದ ಅಧಿಕಾರಿಗಳು ಬಹುತೇಕ ಕಾಮಗಾರಿಗಳಿಗೆ ಈಗಾಗಲೇ ಜಾಬ್ ಕೋಡ್ ಪಡೆದು ಅಂದಾಜುಪಟ್ಟಿಗಳನ್ನು ತಯಾರಿಸಿದ್ದು, ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದ ನಂತರ ಕಾರ್ಯಾದೇಶಗಳನ್ನು ನೀಡಿ ಕಾಮಗಾರಿಗಳನ್ನು ಪ್ರಾರಂಭಿಸಿರುತ್ತಾರೆ ಹಾಗೂ ಭಾಗಾಂಶ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಈ ಹಿನ್ನಲೆಯಲ್ಲಿ ಪ್ರತಿ ವಾರ್ಡ್‌ನಲ್ಲಿ ನೀರಿನ ಅಭಾವವನ್ನು ಕಡಿಮೆ ಮಾಡಲು ನಿಯಮಗಳಂತೆ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದರೂ ಸಹ ಹಾಲಿ ಸ್ಥಿತಿಯಲ್ಲಿ ಬಹುತೇಕ ಪಾಲಿಕೆ ಸದಸ್ಯರು ದಿನಾಂಕ:26-04-2017 ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ಪ್ರಸ್ತುತ ಬೇಸಿಗೆ ಬರಗಾಲದಿಂದ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೇ ಸಾರ್ವಜನಿಕರು ಪರದಾಡುವಂತಾಗಿದೆ ಎಂದು ತಿಳಿಸಿದ್ದು ಅಗತ್ಯ ಕ್ರಮಗಳನ್ನು ವಿಳಂಭವಾಗದೇ ತುರ್ತಾಗಿ ಕೈಗೊಂಡು ನೀರಿನ ಅಭಾವವನ್ನು ಕಡಿಮೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ದಿನಾಂಕ:26-04-2017 ರಂದು ನಡೆದ ಮಾಸಿಕ ಪಾಲಿಕೆ ಸಭೆಯಲ್ಲಿ ಪೂಜ್ಯ ಮಹಾಪೌರರು ಕುಡಿಯುವ ನೀರಿನ ಅಭಾವವನ್ನು ಕಡಿಮೆ ಮಾಡಲು ನಗರ ಪಾಲಿಕೆಯ ಹೊರ ವಲಯಗಳ ವ್ಯಾಪ್ತಿಯಲ್ಲಿ ಬರುವ 110 ಹಳ್ಳಿಗಳಲ್ಲಿ ಪ್ರತಿ ಹಳ್ಳಿಗೆ ಹೊಸದಾಗಿ ಒಂದು ಕೊಳವೆ ಬಾವಿಯನ್ನು ಕೊರೆಯಲು ಹಾಗೂ ಈ ಹಿನ್ನಲೆಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಈಗಾಗಲೇ ಜಾಬ್ ಕೋಡ್ ನೀಡಿರುವ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು. ಕುಡಿಯುವ ನೀರಿನ ಪೈಪ್‌ಗಳ ಅಳವಡಿಕೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸಲಾಗಿರುತ್ತದೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಇರುವ ಎಲ್ಲಾ 198 ವಾರ್ಡ್‌ಗಳಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಕಾರ್ಯಗಳನ್ನು ತುರ್ತಾಗಿ ಆದ್ಯತೆಯ ಮೇರೆಗೆ ಕೈಗೊಂಡು, ಬಿಲ್ಲುಗಳನ್ನು ಕೂಡಲೇ ಪಾವತಿಸಲು ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿರುವ ಬಿಲ್ಲುಗಳನ್ನು ಡಿ.ಸಿ ಬಿಲ್ಲುಗಳ ಮುಖಾಂತರ ಪಾವತಿಸಲು ಪಾಲಿಕೆಯ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. ಮುಂದುವರೆದಂತೆ, ವಲಯದ ಮುಖ್ಯ ಅಭಿಯಂತರರು/ಕಾರ್ಯಪಾಲಕ ಅಭಿಯಂತರರು ಅಧಿಕಾರ ಪ್ರತ್ಯಾಯೋಜನೆಯಂತೆ 2016-17ನೇ ಸಾಲಿನ ನೀರು ಸರಬರಾಜು ಕಾಮಗಾರಿಗಳನ್ನು ಕೂಡಲೇ ನಿರ್ವಹಿಸಲು ಮತ್ತು 2017-18 ರಲ್ಲಿ ಉದ್ದೇಶಿಸಿರುವ ನೀರು ಸರಬರಾಜು ಕಾಮಗಾರಿಗಳಿಗೆ ಜಾಬ್ ಕೋಡ್ ನಿರೀಕ್ಷಿಸಿ, ಕೆಲಸಗಳನ್ನು ಪ್ರಾರಂಭಿಸಲು ಕೂಡಲೇ ಅಗತ್ಯ ಕ್ರಮಗಳನ್ನು ಜರುಗಿಸಿ ಮೆ. ಕೆಆರ್ಐಡಿಎಲ್ ಸಂಸ್ಥೆ ಮುಖಾಂತರ ನಿಯಮಗಳಂತೆ ಕೈಗೊಂಡು ತುರ್ತಾಗಿ ಅನುಷ್ಠಾನಗೊಳಿಸಲು ಆದೇಶಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ವಿಶೇಷ ಆಯುಕ್ತರು (ಯೋಜನೆ) ರವರಿಗೆ ಮಾಹಿತಿಗಾಗಿ.
2. ಪ್ರಧಾನ ಅಭಿಯಂತರರು ರವರಿಗೆ ಮಾಹಿತಿಗಾಗಿ.
3. ವಲಯದ ಅಪರ/ಜಂಟಿ ಆಯುಕ್ತರು ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಸೂಕ್ತ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಸೂಚಿಸಿದೆ.
4. ವಲಯದ ಮುಖ್ಯ ಅಭಿಯಂತರರು ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಸೂಕ್ತ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಸೂಚಿಸಿದೆ.
5. ಮುಖ್ಯ ಲೆಕ್ಕಾಧಿಕಾರಿ ರವರಿಗೆ ಮಾಹಿತಿಗಾಗಿ ಮತ್ತು ನೀರು ಸರಬರಾಜು ಕಾಮಗಾರಿಗಳಿಗೆ ಸಂಬಂಧಿಸಿದ ಬಿಲ್ಲುಗಳನ್ನು ಕೂಡಲೇ ಪಾವತಿಸಲು ಸೂಚಿಸಿದೆ.
6. ಮುಖ್ಯ ಆರ್ಥಿಕ ಅಧಿಕಾರಿರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಸೂಕ್ತ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಸೂಚಿಸಿದೆ.